


# ಕುಸ್ತಿಪಟುವಿನ ಪರಿವರ್ತನೆ


**ಕಥೆ : ಸ್ವಾಮಿ ವಿಮೂರ್ತಾನಂದ**

**ಚಿತ್ರ : ಮಣಿಸೆಲ್ವನ್**

1 ಶ್ರೀರಾಮಕೃಷ್ಣರು ಎಲ್ಲ ಬಗೆಯ ಭಕ್ತರ ಉದ್ಧಾರಕ್ಕಾಗಿ ಅವತರಿಸಿ ಬಂದವರು. ಅವರ ಕೃಪೆ ಒಂದು ಸಲ ಯಾರ ಮೇಲಾದರೂ ಬಿದ್ದರೆ ಸಾಕು, ಅವರಲ್ಲಿ ಆಧ್ಯಾತ್ಮಿಕ ಉನ್ನತಿ ಉಂಟಾಗಿಯೇ ತೀರುವುದು...




5
ಸ್ವಾಮಿ, ನನ್ನನ್ನು ಕ್ಷಮಿಸಿ. ಪಾಪಿಯಾದ ನನ್ನನ್ನು ಉದ್ಧರಿಸಿ. ನಾನು ನಿಮ್ಮ ಮೊರೆಹೊಕ್ಕಿದ್ದೇನೆ.
ಕೂಡಲೇ ಮನ್ಮಥನ ಮನಸ್ಸಿನಲ್ಲಿದ್ದ ಅಜ್ಞಾನದ ಪರದೆ ಸರಿದುಹೋಯಿತು. ಅವನು ಶ್ರೀರಾಮಕೃಷ್ಣರ ಮುಂದೆ ಸಾಷ್ಟಾಂಗ ನಮಸ್ಕಾರ ಮಾಡಿದ.
ಜೈ ಮಾತೆ! ದಕ್ಷಿಣೇಶ್ವರಕ್ಕೆ ಬಾ. ಎಲ್ಲವೂ ಸರಿಹೋಗುವುದು.
6
ಶ್ರೀರಾಮಕೃಷ್ಣರ ಕೃಪೆಯಿಂದ ಮನ್ಮಥನು ಸಂಪೂರ್ಣವಾಗಿ ಬದಲಾದ. ಬಳಿಕ ಶ್ರೀರಾಮಕೃಷ್ಣರು ಯೋಗಿನ್-ಮಾ ಮನೆಗೆ ಹೋಗಿ, ಅಲ್ಲಿ ಸಂಕೀರ್ತನೆ ಮಾಡತೊಡಗಿದರು.
7
ಕೆಲವು ದಿನಗಳ ನಂತರ... ಈಗ ಮನ್ಮಥನು ಹೊಸ ಮನುಷ್ಯನಾಗಿದ್ದನೆ. ಹಿಂದಿನಂತೆ ಅವನು ಕುಸ್ತಿಗೆ ಹೋಗುತ್ತಿರಲಿಲ್ಲ. ಪ್ರತಿಯೊಬ್ಬರಿಗೂ ಪ್ರೀತಿ, ಗೌರವ ಸಲ್ಲಿಸುತ್ತಿದ್ದ.
ಅವನ ಮನೆಗೆ ಸಮೀಪದಲ್ಲೇ ಶ್ರೀರಾಮಕೃಷ್ಣರ ಶಿಷ್ಯ ಗಂಗಾಧರ (ಮುಂದೆ ಸ್ವಾಮಿ ಅಖಂಡಾನಂದರು) ವಾಸಿಸುತ್ತಿದ್ದ. ಒಂದು ದಿನ ಮನ್ಮಥ ಅವನನ್ನು ಭೇಟಿಯಾದ...
ತಮ್ಮಾ, ನಾನು ಎಂಥ ಕಡುಪಾಪಿಯೆಂದರೆ, ನನಗೆ ಶ್ರೀರಾಮಕೃಷ್ಣರನ್ನು ಭೇಟಿಯಾಗುವ ಯೋಗ್ಯತೆಯಿಲ್ಲ...
ಇಲ್ಲಣ್ಣಾ, ಹಾಗೆ ಹೇಳಬೇಡ ಶ್ರೀರಾಮಕೃಷ್ಣರು ಎಲ್ಲರಿಗೂ ಸೇರಿದವರು... ಬಾ, ಅವರ ಬಳಿಗೆ ಹೋಗೋಣ.
8
ದಕ್ಷಿಣೇಶ್ವರದಲ್ಲಿ ...
ಜೈ ಮಾ! ಅವನನ್ನು ಒಳಕ್ಕೆ ಕರೆದುಕೊಂಡು ಬಾ.
ಗುರುದೇವ, ಮನ್ಮಥನು ನಿಮ್ಮನ್ನು ಕಾಣಲು ಬಂದಿದ್ದನೆ. ಅವನು ಹೊರಗಡೆ ನಿಂತಿದ್ದನೆ. ನಿಮ್ಮನ್ನು ಕಾಣಲು ಅವನು ಹಿಂಜರಿಯುತ್ತಿದ್ದನೆ..


9
ಮನ್ಮಥನು ತಾನು ತಂದಿದ್ದ ಸಿಹಿತಿಂಡಿಯನ್ನು ಭಕ್ತಿ, ಗೌರವಗಳೊಂದಿಗೆ ಶ್ರೀರಾಮಕೃಷ್ಣರಿಗೆ ಕೊಟ್ಟ.
ಗುರುದೇವ, ಅತಿಯಾದ ಬೆವರಿನಿಂದಾಗಿ ಅದು ನನ್ನ ದೇಹಕ್ಕೆ ಅಂಟಿಕೊಳ್ಳುತ್ತದೆ. ಆದ್ದರಿಂದ ...
ಓ, ನೀನು ಬ್ರಾಹ್ಮಣನಲ್ಲವೆ? ಮತ್ತೇಕೆ ನಿನ್ನ ಜನಿವಾರವನ್ನು ಕಿತ್ತೆಸೆದೆ?
ಸಂಪ್ರದಾಯ ಮೀರುವುದು ಒಳ್ಳೆಯದಲ್ಲ... ಜನಿವಾರ ಧರಿಸಿಕೋ. ಪ್ರತಿದಿನವೂ ಗಾಯತ್ರಿ ಜಪ ಮಾಡು.
10
ಅನಂತರ ಶ್ರೀರಾಮಕೃಷ್ಣರು ಮನ್ಮಥನನ್ನು ಕಾಳೀಮಂದಿರಕ್ಕೆ ಕರೆದೊಯ್ದರು. ಅಂದೇ ಅವರು ಅವನಿಗೆ ಮಂತ್ರದೀಕ್ಷೆ ನೀಡಿದರು.
11
ಮನ್ಮಥನು ತನ್ನ ಸಮಯವನ್ನೆಲ್ಲ ಜಪ, ಧ್ಯಾನಗಳಲ್ಲಿ ಕಳೆದ. ಅವನು ಪ್ರತಿ ಉಸಿರಿನಲ್ಲೂ ಮಂತ್ರವನ್ನು ಉಚ್ಚರಿಸತೊಡಗಿದ.
12
ಶ್ರೀರಾಮಕೃಷ್ಣರ ಕೊನೆಯ ದಿನಗಳು ಸಮೀಪಿಸಿದವು... ಅವರ ಶಿಷ್ಯ ಶಶಿ (ಮುಂದೆ ಸ್ವಾಮಿ ರಾಮಕೃಷ್ಣಾನಂದರು) ಭಕ್ತಿಯಿಂದ ಅವರ ಸೇವೆ ಮಾಡುತ್ತಿದ್ದ. ಆ ಸಂದರ್ಭದಲ್ಲಿ ಮನ್ಮಥನು ಅವರನ್ನು ನೋಡಲು ಹೋದ.
ಶಶಿ, ನಾನು ಮನ್ಮಥನೊಂದಿಗೆ ಮಾತನಾಡಬೇಕು. ಬೇರೆ ಯಾರನ್ನೂ ಒಳಕ್ಕೆ ಬಿಡಬೇಡ.
ಶಶಿ ಕಾವಲು ನಿಂತಿರಬೇಕಾದರೆ ಶ್ರೀರಾಮಕೃಷ್ಣರು ಮನ್ಮಥನಿಗೆ ಉಪದೇಶ ನೀಡಿದರು. ಸ್ವಲ್ಪ ಸಮಯದ ನಂತರ...
13
ಶಶಿ, ನನ್ನ ಭಾವಚಿತ್ರವನ್ನು ತಂದುಕೊಡು...
ಇಲ್ಲೇ ಇದೆ, ಠಾಕೂರ್.
ಶ್ರೀರಾಮಕೃಷ್ಣರು ಆ ಭಾವಚಿತ್ರವನ್ನು ಸ್ಪರ್ಶಿಸಿ ಮನ್ಮಥನಿಗೆ ಕೊಟ್ಟರು. ಆಗ ಮನ್ಮಥನಿಗೆ ಭಾವಾವಸ್ಥೆಯುಂಟಾಯಿತು.




''ಆತ್ಮನನ್ನು ಸಾಕ್ಷಾತ್ಕರಿಸಿಕೊಂಡವನ ಹೃದಯದ ಗ್ರಂಥಿಯು ನಾಶವಾಗಿ ಅವನು ಶುದ್ಧನಾಗುವನು. ಅವನ ಸಂಶಯಗಳೆಲ್ಲವೂ ನಾಶವಾಗುವವು. ಅವನ ಕರ್ಮಗಳೆಲ್ಲವೂ ಕಳಚಿಹೋಗುವುವು.''

– ಮುಂಡಕೋಪನಿಷತ್, 2.2.9